ವಿದ್ಯಾರ್ಥಿನಿಲಯ ಕಟ್ಟಲು	ಕ.ಭೂ. ಸೇನಾ ಅಭಿವೃದ್ಧಿ ನಿಗಮಕ್ಕೆ ಜಿಡುಗಡೆ ಮಾಡಿದೆ.	
8. ಪರಿಶಿಷ್ಟ ಜಾತಿಯ ಬಾಲಕರ	90-91	ನಿರ್ದೇಶಕರ
ವಿದ್ಯಾರ್ಥಿನಿಲಯ ಕಟ್ಟಲು	91-92	ಪಿ.ಡಿ. ಖಾತೆಯಲ್ಲಿ
	92-93	ಇತ್ತಲಾಗಿದೆ.
9. ಪರಿಶಿಷ್ಟ ವರ್ಗದ ಬಾಲಕಿಯರ	90-91	92-93ರಲ್ಲಿ ಹಣ ಜಡುಗಡೆ ಮಾಡಿದೆ.
ವಿದ್ಯಾರ್ಥಿನಿಲಯ ಕಟ್ಟಲು	91-92	
	92-93	
10. ವೈದ್ಯಕೀಯ ಮತ್ತು ತಾಂತ್ರಿಕ	90-91	2.62
ವಿದ್ಯಾರ್ಥಿಗಳಿಗೆ ಬುಕ್‌ಬ್ಯಾಂಕ್	91-92	4.49
ಯೋಜನೆ	92-93	3.45
11. ಆನೈರ್ಮಲ್ಯ ವೃತ್ತಿಯಲ್ಲಿ	90-91	0.99
ತೊಡಗಿರುವ ಮಕ್ಕಳಿಗೆ	91-92	1.00
(ಪ.ಜಾತಿ) ವಿದ್ಯಾರ್ಥಿವೇತನ	92-93	2.90
ನೀಡುವ ಬಗ್ಗೆ		

ದಾವಣಗೆರೆ ನಗರದಲ್ಲಿ ದೊಡ್ಡ ಪ್ರಮಾಣದ ಕೈಗಾರಿಕೆಯ ಸ್ಥಾಪನೆ

1113 (1700): ಶ್ರೀ ಪೈ.ಬಿ. ವೀರಣ್ಣ (ದಾವಣಗೆರೆ):-

ಮಾನ್ಯ ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ ನಗರದಲ್ಲಿ ಜನಸಂಖ್ಯೆ ಹೆಚ್ಚುತ್ತಿದ್ದು ಸರಾಸರಿ ನಿರುದ್ಯೋಗಿಗಳು ಸಹ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ಅಲ್ಲಿಗೆ ಒಂದು ದೊಡ್ಡ ಪ್ರಮಾಣದ ಕೈಗಾರಿಕೆಯನ್ನು ಸ್ಥಾಪಿಸುವ ಯೋಜನೆ ಸರ್ಕಾರಕ್ಕಿದೆಯೇ;

ಆ) ಇದ್ದಲ್ಲಿ ಯಾವಾಗ ಸ್ಥಾಪಿಸಲಾಗುವುದು ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ (ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕಾ ಮಂತ್ರಿಗಳು):-

ಅ) ಸಧ್ಯದಲ್ಲಿ ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

ಪರಿಶಿಷ್ಟ ಜಾತಿ ಮತ್ತು ವರ್ಗಗಳ ಪಟ್ಟಿಗೆ ಇತರೆ ಜಾತಿಗಳ ಸೇರ್ಪಡೆಗೆ ರಚಿಸಲಾದ ಉಪಸಮಿತಿ

1114 (1919): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):-

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೆಲವು ಜಾತಿಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಪಟ್ಟಿಗೆ ಸೇರಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಲು ಮೂರು ಸಮಿತಿ ರಚಿಸಿರುವುದು ನಿಜವೆ;

ಆ) ಈ ಪೈಕಿ ಹೆಳವ, ಹೊಳವ, ಅನಾದಿ, ಪಿಚ್ಚಿಗುಂಟಲು ಮುಂತಾದ ಜಾತಿಗಳ ಬಗ್ಗೆ ಡಿ.ಕೆ. ನಾಯ್ಕರ್‌ರವರ ಅಧ್ಯಕ್ಷತೆಯ ಸಮಿತಿ ವರದಿಯನ್ನು ಸರ್ಕಾರಕ್ಕೆ ನೀಡಿರುವುದು ನಿಜವೆ;

ಇ) ಸದರಿ ವರದಿಯನ್ನು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆಯೇ, ಇಲ್ಲದಿದ್ದಲ್ಲಿ ಕಾರಣವೇನು, ಯಾವಾಗ ಕಳುಹಿಸಲಾಗುವುದು ನಿಖರವಾಗಿ ತಿಳಿಸುವುದು.

ಈ) ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) ಈ ಬಗ್ಗೆ ಸರ್ಕಾರ ಒಂದು ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ಸಲಹೆ ಮೇರೆಗೆ ಮೂರು ಉಪಸಮಿತಿಗಳನ್ನು ರಚಿಸಲಾಗಿದೆ.

ಆ) ಶ್ರೀ ಡಿ.ಕೆ. ನಾಯ್ಕರ್‌ರವರ ಅಧ್ಯಕ್ಷತೆಯ ಉಪಸಮಿತಿಯು ವರದಿಯನ್ನು ಮುಖ್ಯ ಸಮಿತಿಗೆ ಸಲ್ಲಿಸಿದೆ.

ಇ) ಮುಖ್ಯ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿರುವುದಿಲ್ಲ. ಸರ್ಕಾರಕ್ಕೆ ವರದಿ ಬಂದ ಕೂಡಲೇ ಇದನ್ನು ಪರಿಶೀಲಿಸಿ ಅರ್ಹವೆಂದು ಕಂಡು ಬಂದ ಜಾತಿಗಳನ್ನು ಕೇಂದ್ರ ಸರ್ಕಾರಕ್ಕೆ ಸೂಕ್ತವಾಗಿ ಶಿಫಾರಸ್ಸು ಮಾಡಲಾಗುವುದು.

ಈ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಗಿರಿಜನ ನಿರ್ದೇಶನಾಲಯ ಸ್ಥಾಪನೆ

1116 (1920): ಶ್ರೀ ಎಸ್. ರುದ್ರಪ್ಪ (ತುರುವೇಕೆರೆ):-

ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಪ್ರತಿ ಜಿಲ್ಲೆಯಲ್ಲಿ ಗಿರಿಜನರು ವಾಸವಾಗಿರುವುದು ನಿಜವೆ;

ಆ) ಹಾಗಿದ್ದಲ್ಲಿ ಜಿಲ್ಲಾವಾರು ಗಿರಿಜನರ ಸಂಖ್ಯೆ ಎಷ್ಟು ತಿಳಿಸಿ;

ಇ) ಗಿರಿಜನ ಉಪಯೋಜನೆಯನ್ನು ಪ್ರತಿ ಜಿಲ್ಲೆಗೂ ವಿಸ್ತರಿಸಲು ಸಾಧ್ಯವೇ, ಹಾಗಿದ್ದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು, ಆದೇಶಗಳೊಂದಿಗೆ ತಿಳಿಸಿ.

ಈ) ಪ್ರತಿ ಜಿಲ್ಲೆಯಲ್ಲಿ ಗಿರಿಜನರು ವಾಸಿಸುವ ಗ್ರಾಮ, ತಾಲ್ಲೂಕು, ಗುರುತಿಸಿ ಘೋಷಿಸಲಾಗಿದೆಯೇ ತಿಳಿಸಿ: ಇಲ್ಲದಿದ್ದಲ್ಲಿ ಕಾರಣವೇನು, ಯಾವ ವೈಜ್ಞಾನಿಕ ಪದ್ಧತಿ ಅನುಸರಿಸಿದ್ದೀರಿ ತಿಳಿಸಿ.

ಉ) ಆಂಧ್ರಪ್ರದೇಶ, ಮಹಾರಾಷ್ಟ್ರಗಳ ರಾಜ್ಯದಂತೆ ಪ್ರತ್ಯೇಕ ಗಿರಿಜನ ನಿರ್ದೇಶನಾಲಯ ಸ್ಥಾಪನೆಗೆ ಸರ್ಕಾರದ ಅಭಿಪ್ರಾಯವೇನು ? ಯಾವಾಗ ಪ್ರಾರಂಭಿಸಲಾಗುವುದು ಸ್ಪಷ್ಟವಾಗಿ ತಿಳಿಸಿ ?

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):-

ಅ) ನಿಜ.